ಅಧ್ಯಕ್ಷರು: ಏನೂ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ದಯವಿಟ್ಟು ನಾವಂತೂ ಮಧ್ಯಾಹ್ನ ಇರಲಿಕ್ಕೆ ಆಗುವುದಿಲ್ಲ. ಮಧ್ಯಾಹ್ನ ಮೂರು ಗಂಟೆಗೆ ಕಾರ್ಯಕ್ರಮಗಳನ್ನು ಫಿಕ್ಸ್ ಮಾಡಿಕೊಂಡಿದ್ದೇವೆ. ಬೇಕಾದರೆ ಅಧಿವೇಶನವನ್ನು ಇನ್ನೂ ಒಂದು ವಾರ ನಡೆಸಿ. ನಮ್ಮದೇನೂ ತಕರಾರಿಲ್ಲ. ಆದರೆ ಮಧ್ಯಾಹ್ನ ನಾವು ಹಲವಾರು ಕಾರ್ಯಕ್ರಮಗಳನ್ನು ನಿಗದಿ ಮಾಡಿದ್ದೇವೆ. ನಾವಂತೂ ಇರಲಿಕ್ಕಾಗುವುದಿಲ್ಲ. ದಯವಿಟ್ಟು ತಾವು ಸಹಕಾರವನ್ನು ಕೊಡಬೇಕು.

ಅಧ್ಯಕ್ಷರು: ತಮ್ಮ ಪರವಾಗಿ ಮಾನ್ಯ ಸುರೇಶ್ ಕುಮಾರ್ ಅವರೆಲ್ಲಾ ಇರುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್: ನಮ್ಮ ಪಾರ್ಟಿ ಕಡೆಯಿಂದಲೇ ಯಾರೂ ಕೂಡ ಇರುವುದಕ್ಕಾಗುವುದಿಲ್ಲ. ಆ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ.

ಅಧ್ಯಕ್ಷರು: ಇಲ್ಲಿ ಕೇಳಿ. ಕೆಲವು ನಾವು ಎರಡು ಗಂಟೆಗೆ ಮುಗಿಸಬೇಕೆಂದರೂ ಸಂಜೆವರೆಗೂ ಕುಳಿತಿರುತ್ತೇವಲ್ಲಾ ಬೇಕಾದಷ್ಟು ಸಲ ಕುಳಿತಿದ್ದೇವಲ್ಲಾ. ಆ ರೀತಿ ನೀವು ಅಡ್ಜಸ್ಟ್ ಮಾಡಿಕೊಳ್ಳದಿದ್ದರೆ ಹೇಗೆ? ಅದೂ ಕೊನೆಯ ದಿವಸ. ತಾವು ದಯವಿಟ್ಟು ಅಡ್ಜಸ್ಟ್ ಮಾಡಿಕೊಳ್ಳಿ. ಈಗ ಸದನವನ್ನು ಮೂರು ಗಂಟೆಗೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 4.00 ಗಂಟೆಗೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:-

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು. ಕಾರ್ಯದರ್ಶಿಯವರು ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುವುದು.

ಶ್ರೀ ಟಿ. ರಾಜಣ್ಣ:- (ಕಾರ್ಯದರ್ಶಿಯವರು ವಿಧಾನಸಭೆ) :- ಮಾನ್ಯ ಅಧ್ಯಕ್ಷರೆ,

i) ರಾಜ್ಯಪಾಲರಿಂದ ಉಲ್ಲೇಖಿಸಲಾಗಿರುವ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998 ಅನುಬಂಧ VII, VIII, IX ಸಭೆ ಮುಂದೆ ಮಂಡಿಸುತ್ತೇನೆ.

ii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2004. ಅನುಬಂಧ VII, VIII, IX ಸಭೆ ಮುಂದೆ ಮಂಡಿಸುತ್ತೇನೆ.

iii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ 2004.

4. ಪ್ರಕಟಣೆ

ಅಧ್ಯಕ್ಷರು: ಮಂಡಿಸಲಾಯಿತು.

ಅಧ್ಯಕ್ಷರು: ಈಗ ಪ್ರಕಟಣೆ. ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.